ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 6, May-Jun 2020, 16-22**
**©*IIMRD*, Mysuru**
IIMRD JOURNALS
**www.iimrd.com**

# ಹಿರೇಗುಂಟನೂರು ಪರಿಸರದ ಸಾಂಸ್ಕೃತಿಕ ಆಚರಣೆಗಳು: ಐತಿಹಾಸಿಕ ಅವಲೋಕನ

**ಡಾ. ವಿ. ನಾಗರಾಜ*[*] ಮತ್ತು ಡಾ. ಬಿ.ಎಸ್. ಪದ್ಮ[*]**

**ಪೀಠಿಕೆ**

ಹಿರೇಗುಂಟನೂರು ಗ್ರಾಮವು ಚಿತ್ರದುರ್ಗ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಹಿಂದಿನಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದಿರುವ ಗ್ರಾಮವನ್ನು ವಿಜಯನಗರ ಅರಸರಿಂದಿಡಿದು ಪಾಳೆಯಗಾರರ ಕಾಲದವರೆಗೂ ಆಳ್ವಿಕೆ ನಡೆಸಿದ್ದಾರೆ ಎಂಬುದಕ್ಕೆ ಇಲ್ಲಿನ ಶಾಸನಗಳೆ ಆಧಾರಗಳಾಗಿವೆ. ವಿಜಯನಗರ ಅರಸರ ಕಾಲದಲ್ಲಿ ಬೆಮ್ಮತ್ತುಕಲ್ಲು ಅಥವಾ ಚಿತ್ರದುರ್ಗ ಸೀಮೆಯೊಳಗೆ ಸೇರಿದ್ದರೆ, ನಂತರ ಚಿತ್ರಹಳ್ಳಿಸೀಮೆಗೆ ಸೇರಿದ ಮಾಗಣಿಯಾಗಿತ್ತು. ಅನಂತರ ಪಾಳೆಯಗಾರರ ಕಾಲದಲ್ಲಿ ಚಿತ್ರದುರ್ಗದ ನೈರುತ್ಯ ಮತ್ತು ಪಶ್ಚಿಮದ ಪ್ರದೇಶಗಳು ಈ ಹಿರೇಗುಂಟನೂರು ಸೀಮೆಯಲ್ಲಿ ಅಡಕವಾಗಿದ್ದವು. ಈ ರೀತಿಯಾಗಿ ಐತಿಹಾಸಿಕವಾಗಿ ಮಹತ್ವ ಪಡೆದಿರುವ ಹಿರೆಗುಂಟನೂರು ಪರಿಸರದಲ್ಲಿ (ವ್ಯಾಪ್ತಿಯಲ್ಲಿ) ಇಂದಿಗೂ ಹಲವು ಆಚರಣೆಗಳು ನಡೆಯುತ್ತಿವೆ. ಹುಲ್ಲೂರು, ಲಕ್ಷ್ಮೀಸಾಗರ ಮತ್ತು ಹಿರೇಗುಂಟನೂರು ಗ್ರಾಮಗಳಲ್ಲಿ ವಾರ್ಷಿಕವಾಗಿ ಹಲವು ಜಾತ್ರಾ ಮಹೋತ್ಸವಗಳು ನಡೆಯುತ್ತಿದ್ದು, ಅಂತಹ ವಿಶಿಷ್ಟ ಸಾಂಸ್ಕೃತಿಕಾಚರಣೆಗಳನ್ನು ಮತ್ತು ಅವುಗಳ ಮಹತ್ವವನ್ನು ವಿಶ್ಲೇಷಿಸುವ ಉದ್ದೇಶ ಈ ಲೇಖನದ್ದಾಗಿದೆ.

ಸಂಸ್ಕೃತಿ ಎಂಬುದು Culture ಎಂಬ ಆಂಗ್ಲ ಪದದ ಅನುವಾದವಾಗಿದ್ದು, ಇದು ಲ್ಯಾಟಿನ್ ಭಾಷೆಯ Cult ಅಥವಾ Cults ಎಂಬುದು. ಆ ಪದದ ಮೂಲಾರ್ಥ ಗೌರವಿಸು, ಸೇವಿಸು, ನಿಷ್ಠೆಮಾಡು, ಲಕ್ಷ್ಯದಲ್ಲಿರಿಸಿಕೊ ಎಂಬ ರೀತಿಯದಾಗಿತ್ತು. ಆ ಮಾತಿನಿಂದ ಕ್ರಮೇಣ ಎರಡು ಅರ್ಥಗಳು ಹೊರಟವು ಒಂದು ದೈವಭಕ್ತಿ, ವ್ರತದೀಕ್ಷೆ, ಮತ ಸಿದ್ಧಾಂತ, ಇತ್ಯಾದಿ ಎರಡನೆಯದು ಭೂದೇವಿಯ ಆರಾಧನೆ, ಭೂಮ್ಯಾಸಕ್ತಿ, ಕೃಷಿ, ಉಳುಮೆ, ಪೈರು ಬೆಳೆಸುವುದು ಇತ್ಯಾದಿ[1]

ಸಂಸ್ಕೃತಿ ಎಂಬುದು ನಡವಳಿಕೆಯಾಗಿದ್ದು, ಜೀವನ ಸ್ವರೂಪವನ್ನು ನಿರ್ಧರಿಸುವ ಗುಣವನ್ನು ಹೊಂದಿದೆ. ಸಂಸ್ಕೃತಿಯನ್ನು ವ್ಯಾಖ್ಯಾನಿಸುವಾಗ ಭೌತಿಕ ಸಂಸ್ಕೃತಿ ಮತ್ತು ಅಭೌತಿಕ ಸಂಸ್ಕೃತಿಗಳೆಂದು ವಿಭಾಗ ಮಾಡುವ ಪ್ರಯತ್ನಗಳನ್ನು ಸಹ ಕಾಣುತ್ತೇವೆ. ಪರಿಸರ, ಪರಂಪರೆ ಹಾಗೂ ಪ್ರತ್ಯಕ್ಷ ಜೀವನದ ಅನೇಕ ಸಂಸ್ಕಾರಗಳ ಮೂಲಕ ಮನುಷ್ಯನ ಅಂತರಂಗ ಪಡೆಯುವ ಪರಿಪಕ್ವತೆ ಇದ್ದು, ಸಂಸ್ಕೃತಿಯನ್ನು ಕುರಿತಂತೆ ಒಂದು ಸ್ಥೂಲವಾದ ವ್ಯಾಖ್ಯೆ ಎನ್ನಲಾಗಿದೆ. ಮಾನವಶಾಸ್ತ್ರಜ್ಞರು, ನೈಸರ್ಗಿಕವಾಗಿರುವುದನ್ನು ಬಿಟ್ಟು ಮಾನವ ನಿರ್ಮಿತ (ಉಳಿದ) ಎಲ್ಲಾ ಅಂಶಗಳನ್ನು ಸಂಸ್ಕೃತಿ ಎಂದು ವ್ಯಾಖ್ಯಾನಿಸುತ್ತಾರೆ. ಉಡುಗೆ–ತೊಡುಗೆ, ಆಚರಣೆ, ವಸತಿ ವ್ಯವಸ್ಥೆ, ಉಪಕರಣಗಳು ಇತರ ಎಲ್ಲಾ ಅಂಶಗಳು ಕೂಡ ಸಂಸ್ಕೃತಿಯ ವ್ಯಾಪ್ತಿಗೆ ಒಳಪಡುತ್ತದೆ. ಪ್ರಸ್ತುತ ಲೇಖನದಲ್ಲಿ ಹಿರೇಗುಂಟನೂರು ಆಚರಣೆಯಲ್ಲಿರುವ ಹಬ್ಬ ಹರಿದಿನ ಮತ್ತು ಜಾತ್ರೆಗಳನ್ನು ಕುರಿತು ಚರ್ಚಿಸಲಾಗಿದೆ. ಭಾರತೀಯ ಸಂಸ್ಕೃತಿಯು ವಿಭಿನ್ನ ಪ್ರಾದೇಶಿಕ ಸಂಸ್ಕೃತಿಗಳ ಒಟ್ಟು ಮೊತ್ತವಾಗಿದೆ. ಹೀಗಾಗಿ ಅದು ಸಂಕೀರ್ಣ ಸ್ವರೂಪದ ಸಂಸ್ಕೃತಿ ಎನ್ನಲು ಅಡ್ಡಿಯಿಲ್ಲ. ಭೌಗೋಳಿಕ

*[1] ಉಪನ್ಯಾಸಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ.*

ಲಕ್ಷಣಗಳು, ಭಾಷೆ, ಧರ್ಮ ಇವುಗಳಿಂದಾಗಿ ಪ್ರಾದೇಶಿಕ ಭೇದಗಳುಂಟಾಗಿ ಸಂಸ್ಕೃತಿಯ ಅಭಿವ್ಯಕ್ತಿಗೆ ವೈವಿಧ್ಯಯನ್ನು ಒದಗಿಸಿವೆ. ಕರ್ನಾಟಕದ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದರೂ ತನ್ನದೇ ಆದ ಉದಾತ್ತ ಗುಣಗಳಿಂದಾಗಿ ವಿಶೇಷವಾಗಿ ಮತ್ತು ಪ್ರೌಢವಾಗಿ ಗೋಚರಿಸುತ್ತದೆ. ಕರ್ನಾಟಕದ ಸಂಸ್ಕೃತಿಗೆ ಹಿರಿದಾದ ಅಂತಃಸತ್ವವಿದ್ದು, ಅನೇಕ ಶತಮಾನಗಳ ಕಾಲಾವಧಿಯಲ್ಲಿ ಕೊಡುಕೊಳ್ಳುವಿಕೆಗಳ ಗುಣದಿಂದಾಗಿ ಉನ್ನತ ಸ್ಥಾನದಲ್ಲಿದೆ.[ii]

ಕರ್ನಾಟಕದಲ್ಲಿ ಮಾನವನ ಅಸ್ತಿತ್ವವನ್ನು ಕ್ರಿ.ಪೂ. 5,00,000 ವರ್ಷಗಳಿಂದಲೂ ಗುರುತಿಸಿದ್ದಾರೆ. ಕ್ರಿ.ಪೂ.300ವರೆಗಿನ ಜನಜೀವನವನ್ನು ಶಿಲಾಯುಗಗಳ ಕಾಲದ ಸಂಸ್ಕೃತಿ ಎಂದು ಪುರಾತತ್ವಜ್ಞರು ಕರೆದಿದ್ದಾರೆ. ಶಿಲಾಶಾಸನಗಳ ಆಗಮನ ಕಾಲದಿಂದ ಇಲ್ಲಿಯವರೆಗಿನ ಸಂಸ್ಕೃತಿಯನ್ನು ಕುರಿತು ಅಧ್ಯಯನಗಳು ವಿವಿಧ ನೆಲೆಯಲ್ಲಿ ನಡೆಯುತ್ತ ಬಂದಿವೆ. ಅಶೋಕನ ಶಾಸನಗಳ ಅಸ್ತಿತ್ವದಿಂದಾಗಿ ಕರ್ನಾಟಕವೂ ಔತ್ತರೇಯ ಸಂಸ್ಕೃತಿಯ ಸಂಪರ್ಕವನ್ನು ಹೊಂದಿತ್ತೆಂಬ ಸಂಗತಿ ಗಮನಾರ್ಹ. ಕ್ರಿ.ಶ. 1–2ನೆ ಶತಮಾನದಲ್ಲಿ ರೋಮ್, ಚೀನಾ ಮತ್ತಿತರ ದೇಶಗಳ ಸಂಪರ್ಕ ಸಾಧಿಸಿದ ಕರ್ನಾಟಕವು ಹೆಚ್ಚು ಕೊಡುಕೊಳ್ಳುವಿಕೆಗಳ ಕ್ರಿಯೆಗೆ ಒಳಗಾಯಿತು. ನಂತರದ ಶತಮಾನಗಳಲ್ಲಿ ಆಗ್ನೇಯ ಏಷ್ಯಾದ ದೇಶಗಳೊಂದಿಗೆ ವ್ಯಾಪಾರ ವ್ಯವಹಾರಗಳಲ್ಲದೆ, ಸಾಂಸ್ಕೃತಿಕ ಸಂಪರ್ಕಗಳನ್ನು ಹೊಂದಿತು. ಈ ಚಾರಿತ್ರಿಕ ಘಟನೆಗಳಿಂದ ಕರ್ನಾಟಕ ಸಂಸ್ಕೃತಿಯು ಕಾಲಕಾಲಕ್ಕೆ ಹೊಸ ಹೊಸ ಅಂಶಗಳನ್ನು ತನ್ನದಾಗಿಸಿಕೊಂಡು ಬೆಳೆದ ಬಗೆಯನ್ನು ಮನಗಾಣುತ್ತೇವೆ. ಅಂದರೆ ವ್ಯಾಪಾರ ವ್ಯವಹಾರಗಳೊಂದಿಗೆ ವೇಷಭೂಷಣಗಳು, ಆಹಾರ ಪದ್ಧತಿ, ಆಚಾರ–ವಿಚಾರಗಳು, ಕಲೆ ಮತ್ತು ವಾಸ್ತುಶಿಲ್ಪ, ನಾಣ್ಯ ಮೊದಲಾದ ಕ್ಷೇತ್ರಗಳಲ್ಲಿ ಕೊಡುಕೊಳ್ಳುವಿಕೆಗಳು ವ್ಯಾಪಕ ಪ್ರಮಾಣದಲ್ಲಿ ನಡೆದಿವೆ. ಉದಾಹರಣೆಗೆ ಸೀರೆ, ಗ್ರೀಕ್ ಸಂಸ್ಕೃತಿಯ ಕೊಡುಗೆ ಎನ್ನಲಾಗಿದೆ. ಹೀಗೆ ನಮ್ಮದಲ್ಲದ ಅನೇಕಾನೇಕ ವಸ್ತು ಮತ್ತು ವಿಷಯಗಳು ಇಂದು ನಮ್ಮೊಂದಿಗೆ ಬೆರೆತು ನಮ್ಮದಾಗಿ ಬಿಟ್ಟಿವೆ. ಹಾಗು ನಮ್ಮದೆಂದು ತಿಳಿದು ಬದುಕುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಸ್ಥಳೀಯವಾಗಿ ಆಚರಿಸುವ ಸಾಂಸ್ಕೃತಿಕಾಚರಣೆಗಳ ಬಗ್ಗೆ ತಿಳಿಯುವುದು ಅತ್ಯವಶ್ಯಕವಾಗಿದೆ.[iii]

**ಹಬ್ಬಗಳು ಮತ್ತು ಜಾತ್ರೆಗಳು (ಧಾರ್ಮಿಕ ಆಚರಣೆಗಳು)**

ಹಬ್ಬ–ಜಾತ್ರೆಗಳು ಸಾಮಾನ್ಯವಾಗಿ ನಂಬಿಕೆಯ ಆಧಾರದ ಮೇಲೆ ನೆಲೆಗೊಂಡ ಸಾಂಪ್ರದಾಯಿಕ ಆಚರಣೆಗಳು. ಇವೆಲ್ಲ ದಿಡೀರ್ ಹುಟ್ಟು ಪಡೆಯದೆ ಮನುಷ್ಯನ ಭೌಗೋಳಿಕ ಸಾಮಾಜಿಕ ಹಿನ್ನಲೆಯಲ್ಲಿ ನೆಲೆಗೊಂಡ ಜಾನಪದ ಸಂಪ್ರದಾಯಗಳು. ಈ ಜನಪದ ಸಂಸ್ಕೃತಿ ಬದಲಾಗುತ್ತಿರುವ ಸಾಮಾಜಿಕ ಹಿನ್ನಲೆಯಲ್ಲಿ ಕಾಲ ಸಂದರ್ಭಗಳಿಗೆ ಅನುಗುಣವಾಗಿ ಅರ್ಥಪೂರ್ಣ ಹಿನ್ನಲೆಯನ್ನು ಪಡೆದುಕೊಂಡಿರುತ್ತದೆ. ಹೀಗೆ ಆಚರಣೆಯಲ್ಲಿದ್ದ ಎಷ್ಟೋ ಹಬ್ಬ–ಜಾತ್ರೆಗಳು ಬದಲಾದ ರಾಜಕೀಯ, ಸಾಮಾಜಿಕ ಜೀವನ ಮೌಲ್ಯಗಳ ಹೊಡೆತಕ್ಕೆ ಸಿಕ್ಕಿ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಂಡಿವೆ. ಕೆಲವಂತೂ ಇಂದಿಗೂ ಹೇಳ ಹೆಸರಿಲ್ಲದಂತಾಗಿದೆ ಎನ್ನಬಹುದು. ಹಬ್ಬ ಸಾಮಾನ್ಯವಾಗಿ ಒಂದು ಸಾರ್ವತ್ರಿಕ ಆಚರಣೆಯಾಗಿರಬಹುದು ಅಥವಾ ಆಯಾ ಪಂಗಡದ ಊರಿನ ಸಾಂಪ್ರಾದಾಯಿಕ ವಿಶಿಷ್ಟಾಚರಣೆಯಾಗಿರಬಹುದು. ಏನೇ ಆದರು ಸಹ ಸಾಂಪ್ರದಾಯಿಕ ನೆಲೆಗಟ್ಟಿನ ಮೇಲೆ ಸಮಾಜದ ಒಳಿತನ್ನು ಗುರಿಯಾಗಿಟ್ಟುಕೊಂಡಿರುವುದು ಮುಖ್ಯವಾಗಿರುತ್ತದೆ.

ಒಂದು ಕರಾರುವಕ್ಕಾದ ಅವಧಿಯಲ್ಲಿ ಒಂದು ನಿರ್ದಿಷ್ಟ ಗುಂಪೊಂದು ತನ್ನ ಗ್ರಾಮ ದೇವತೆಗೆ ಸಲ್ಲಿಸುವ ಪೂಜೆ ಪುನಸ್ಕಾರಗಳ ಸಾಂಪ್ರಾದಾಯಿಕ ಆಚರಣೆಯನ್ನೇ ಜಾತ್ರೆ ಎನ್ನಬಹುದು. ಜನ ಸೇರಿದ ಈ ಜಾತ್ರೆಯಲ್ಲಿ ಕೇವಲ ವ್ಯಾಪಾರ ವ್ಯವಹಾರವೇ ಮುಖ್ಯವಾಗಿರದೆ ದೈವ ಸಂಬಂಧವಾದ ಸಾಂಸ್ಕೃತಿಕ ಆಚರಣೆಗಳು ಧಾರ್ಮಿಕವಾಗಿ ಅನುಸರಣೆಗೊಳ್ಳಬೇಕು. ದೇವತಾರಾಧನೆಯ ನೆಪದಲ್ಲಿ ಕಲೆತ ಮಂದಿ

ತಮ್ಮ ವ್ಯವಹಾರಗಳನ್ನು ಕುದುರಿಸಿಕೊಳ್ಳುತ್ತಾರೆ ಎನ್ನುವಂತೆ ಸಮಾಜದ ಗುಂಪುಗಳ ಮತ್ತು ವ್ಯಕ್ತಿ ನಡುವಿನ ಸಾಮರಸ್ಯಕ್ಕೆ ಮಧುರ ಸೇತುವೆಯಾಗಬಲ್ಲದು. ಕೌಟಂಬಿಕ ವ್ಯವಹಾರ ಕಷ್ಟ–ಸುಖ, ಮಳೆ–ಬೆಳೆ ಹಾಗು ಬಾಂಧವ್ಯ ಸಮೀಕರಣಕ್ಕೂ ಜಾತ್ರೆ ಉತ್ತಮವಾದ ಸಾಧನವಾಗಬಹುದು. ಇದರಿಂದಾಗಿ ಸಾಮಾಜಿಕ ಬಾಂಧವ್ಯ ಸುಧಾರಣೆಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಇಂದು ಹಬ್ಬ–ಜಾತ್ರೆಗಳು ಅರ್ಥಪೂರ್ಣ ಎನಿಸಿಕೊಳ್ಳಲು ಸಾಧ್ಯವಾಗುತ್ತವೆ.[3]

**ಹಿರೇಗುಂಟನೂರು ದ್ಯಾಮಲಾಂಬ ಜಾತ್ರಾಮಹೋತ್ಸವ**

ಜಾತ್ರಾ ಮಹೋತ್ಸವಗಳು ಜನಪದರ ಅಥವಾ ಜಾನಪದ ಸಂಸ್ಕೃತಿಯ ಅವಿಭಾಜ್ಯ ಅಂಗ. ಹಳ್ಳಿಯ ಜನರ ಮನೋಲ್ಲಾಸ ಹೆಚ್ಚುವ ಹಬ್ಬ. ದೇವರ ದರ್ಶನ, ಆರಾಧನೆ, ಆಟಿಕೆಗಳ ಜೊತೆಗಿನ ಆಟಕ್ಕೆ, ಭಕ್ತಾದಿಗಳ ಭಕ್ತಿ ಸಮರ್ಪಣೆಗೆ ರಂಗವೇದಿಕೆಯಾದರೆ, ಉತ್ಸವಗಳ ಸಂದರ್ಭದಲ್ಲಿ ತಮಟೆಯ ಶಬ್ದಕ್ಕೆ ಕುಣಿಯುವ ಯುವಕರಿಗಂತೂ ನೃತ್ಯ ವೇದಿಕೆ, ಜಾನಪದ ಸಂಸ್ಕೃತಿಯನ್ನು ಉಳಿಸುವಲ್ಲಿ ಜಾತ್ರೆಗಳ ಕೊಡುಗೆ ಅನನ್ಯ ಮತ್ತು ಅಪಾರ.[5] ಈ ಎಲ್ಲಾ ಘಟನೆಗಳು ದ್ಯಾಮಲಾಂಬೆಯ ಜಾತ್ರೆಯಲ್ಲಿ ಹಾದು ಹೋಗುತ್ತವೆ. ಭಕ್ತರ ಪರಾಕಾಷ್ಠೆ, ಜಾತ್ರೆಯ ಸೊಬಗು ಜಾನಪದ ಸಂಸ್ಕೃತಿ ಮತ್ತು ಯುವಕರ ಮನೋಲ್ಲಾಸಕ್ಕೆ ಈ ಜಾತ್ರೆಗೆ ಸಾಕ್ಷಿಯಾಗುತ್ತದೆ. ಚಂದ್ರಮಾನ ಯುಗಾದಿಯ ಮರುದಿನವೇ ಊರಿನ ಜನರು ಗೌಡರ ಮನೆ ಮುಂದೆ ಸಭೆ ಸೇರುತ್ತಾರೆ. ಜಾತ್ರೆಯ ದಿನಾಂಕ ಮತ್ತು ರೂಪುರೇಷೆಗಳನ್ನು ನಿಗದಿಪಡಿಸುತ್ತಾರೆ. ಜಾತ್ರೆ ನಡೆಸುವುದಕ್ಕಾಗಿ ಗೌಡ, ಗೊಮಚಗಾರ, ತಳವಾರ ಮತ್ತು ಊರಿನ ಮುಖಂಡರು ಹಾಗೂ ಇತರ ಜನರ ಒಪ್ಪಿಗೆ ಪಡೆಯಲಾಗುತ್ತದೆ. ಒಪ್ಪಿಗೆ ಪಡೆದ ನಂತರ ತಳವಾರನಿಗೆ ಆಗ್ರ ತಾಂಬೂಲ ನೀಡುವ ಮೂಲಕ ಜಾತ್ರೆಗೆ ಸಾಂಪ್ರದಾಯಿಕ ಒಪ್ಪಿಗೆ ಸೂಚಿಸಲಾಗುತ್ತದೆ. ನಂತರ ಬುಧವಾರ ಸಂತೆಯಲ್ಲಿ ಸಾರಲಾಗುತ್ತದೆ. ತದನಂತರ ಮುಂದಿನ ಮಂಗಳವಾರದಂದು ಊರು ಸಾರು ಹಾಕಲಾಗುತ್ತದೆ. ಜಾತ್ರೆಯ ಆರಂಭದ ದಿನ ಸೇರಿ ಒಟ್ಟು 7 ದಿನಗಳ ವರೆಗೆ ಅತ್ಯಂತ ಭಕ್ತಿ ವೈಭವದಿಂದ ನಡೆಯುತ್ತದೆ. ಜಾತ್ರೆಯಲ್ಲಿ ಕಲ್ಯಾಣೋತ್ಸವ, ಅಶ್ವೋತ್ಸವ, ನವಿಲು ಉತ್ಸವ, ಗಜೋತ್ಸವ, ಸಿಡಿ ಉತ್ಸವ, ಹೂವಿನ ಪಲ್ಲಕ್ಕಿ ಉತ್ಸವ, ರಥೋತ್ಸವ, ಓಕಳಿ ಉತ್ಸವಗಳು ಕೇವಲ ಭಕ್ತರ ಸಹಕಾರದಿಂದ ನಡೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ಸೇರುವ ಅಪಾರ ಜನಸ್ತೋಮವೇ ದ್ಯಾಮಲಾಂಬೆಯ ಶಕ್ತಿಗೆ ಉದಾಹರಣೆ.

**ಕಲ್ಯಾಣೋತ್ಸವ**

ದ್ಯಾಮಲಾಂಬ ಜಾತ್ರಾ ಮಹೋತ್ಸವ ಆರಂಭವಾಗುವುದೇ ಕಲ್ಯಾಣೋತ್ಸವ ಅಥವಾ ಮೊದಲಂಗಿತ್ತಿಶಾಸ್ತ್ರದಿಂದ. ಇದನ್ನು ದೇವರ ಕಾರ್ಯವೆಂದು ಕರೆಯಲಾಗುತ್ತದೆ. ಊರಿನ ಗೌಡ ಮನೆತನದವರು ಕಲ್ಯಾಣೋತ್ಸವವನ್ನು ನೆರವೇರಿಸುತ್ತಾರೆ. ಆ ಮನೆತನದವರು ಮತ್ತು ವಕ್ಕಲು ಮನೆತನದವರು ದೇವಸ್ಥಾನದಲ್ಲಿ ಅನೇಕ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸುತ್ತಾರೆ. ನಂತರ ಉತ್ಸವ ಮೂರ್ತಿಯನ್ನು ಹೂವಿನಿಂದ ಅಲಂಕೃತವಾದ ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ನಡೆಸುತ್ತಾರೆ. ಹೂವಿನ ನಡುವೆ ವಿರಾಜಮಾನಳಾದ ದ್ಯಾಮಲಾಂಬ ದೃಶ್ಯ ವೈಭವನ್ನು ನೋಡಿಯೇ ಸವಿಯಬೆಕು.[6]

**ಗಜೋತ್ಸವ**

ಜಾತ್ರೆಯಲ್ಲಿ ಗಜೋತ್ಸವದ್ದು ವಿಶಿಷ್ಟ ಸ್ಥಾನ, ಊರಿನ ವಾಲ್ಮೀಕಿ ಸಮುದಾಯದವರು ನಂದಿಕೋಲು ಕುಣಿತದೊಂದಿಗೆ ಸಾಗಿ ಬರುತ್ತಾರೆ. ಇದಕ್ಕೆ ಪೂಜೆ ಸಲ್ಲಿಸಲು ಮಹಿಳೆಯರು ಕಾಯಿ–ಹಣ್ಣು ಹಿಡಿದು ಬಂದರೆ ಅವರ ಮುಂದೆ ಉರಿವ ಬಿಸಿಲಿನಲ್ಲಿ ಯುವಕರು ಮತ್ತು ಪುರುಷರು ನಂದಿಕೋಲು ಕುಣಿಸುತ್ತಾರೆ. ಚಮಳ ಮತ್ತು ನಂದಿಕೋಲಿನ ತಾಳಕ್ಕೆ ತಕ್ಕಂತೆ ಯುವಕರು ಹೆಜ್ಜೆ ಹಾಕುತ್ತಾರೆ. ಬಿಸಿಲಿನ

ಬೇಗೆಯನ್ನೂ ಮರೆತು ಕುಣಿದು ಕುಪ್ಪಳಿಸುತ್ತಾರೆ. ಈ ಸಂದರ್ಭದಲ್ಲಿ ಚೌಡಿಕೆ ಜೋಗಿಗಳು ಪ್ರತಿಯೊಂದು ಮನೆಗೂ ತೆರಳುತ್ತಾರೆ. ಅಂತಿಮವಾಗಿ ನಂದಿಕೋಲಿನ ಕುಣಿತ ಊರ ಮಹಿಳೆಯರೊಂದಿಗೆ ಉಚ್ಚಯ್ಯವಿರುವ ಸ್ಥಳದಲ್ಲಿ ಕೊನೆಗೊಳ್ಳುವುದು ವಿಶೇಷ ಮತ್ತು ಜಾತ್ಯಾತೀತ ಮನೋಭಾವನೆಯನ್ನು ಈ ಆಚರಣೆ ಮೂಡಿಸುತ್ತದೆ.[7]

**ರಥೋತ್ಸವ**

ಜಾತ್ರೆಯ ಪ್ರಮುಖ ಆಕರ್ಷಣೆ ರಥೋತ್ಸವ. ಈ ಸಂದರ್ಭಕ್ಕಾಗಿ ಸಾವಿರಾರು ಭಕ್ತರು ಗಂಟೆಗಳ ಕಾಲ ಕಾದು ಕುಳಿತಿರುತ್ತಾರೆ. ರಥೋತ್ಸವ ಸಾಮಾನ್ಯವಾಗಿ ಸಂಜೆ ವೇಳೆ ನೆರವೇರುತ್ತದೆ. ರಥವನ್ನು ಹೂವುಗಳಿಂದ ಮತ್ತು ಹೂವಿನ ಹಾರಗಳಿಂದ ಅಲಂಕರಿಸಲಾಗುತ್ತದೆ. ನಂತರ ಉತ್ಸವ ಮೂರ್ತಿಯನ್ನು ಅಲಂಕರಿಸಿದ ರಥದಲ್ಲಿ ಕೂರಿಸಲಾಗುತ್ತದೆ. ನಂತರ ಹೂವಿನ ಹಾರ ಮತ್ತು ದೇವರ ಧ್ವಜಗಳ ಹರಾಜು ಪ್ರಕ್ರಿಯೆ ನೆರವೇರುತ್ತದೆ. ರಥೋತ್ಸವಕ್ಕೆ ಗೌಡರ ಮನೆತನದವರು ಎಡೆಯನ್ನು ನೀಡುತ್ತಾರೆ. ಈ ಎಡೆಗೆ ಪೂಜೆ ನೆರವೇರಿದ ನಂತರ ರಥೋತ್ಸವ ಜರುಗುತ್ತದೆ. ಈ ಸಂದರ್ಭದಲ್ಲಿ ಊರಿನ ಮತ್ತೊಬ್ಬ ದೇವತೆಯ ಉಪಸ್ಥಿತಿ ಅತ್ಯಗತ್ಯ. ಆಕೆಯು ರಥೋತ್ಸವವನ್ನು ಪ್ರದಕ್ಷಿಣೆ ಹಾಕುವುದು ವಿಶೇಷ.[8]

ರಥೋತ್ಸವದ ದಿನದಿಂದ ರಥವನ್ನು ಎಣ್ಣೆಯ ಮಜ್ಜನದ ಮೂಲಕ ರಥೋತ್ಸವಕ್ಕೆ ಸಿದ್ಧಪಡಿಸಲಾಗುತ್ತದೆ. ನಂತರ ಹೂವು, ಮತ್ತಿತರ ಅಲಂಕಾರಿಕ ವಸ್ತುಗಳಿಂದ ರಥವನ್ನು ಶೃಂಗರಿಸಲಾಗುತ್ತದೆ. ರಥೋತ್ಸವ ನೆರವೇರಿಸಲು ಗೊಲ್ಲ ಸಮುದಾಯದ ಹಾಗೂ ಹಿರೇಗುಂಟನೂರಿನ ಗೌಡರ ಮನೆತನದ ಮೀಸಲು ಅತ್ಯಗತ್ಯ. ದ್ಯಾಮಲಾಂಬ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಅನೇಕ ಭಕ್ತಾದಿಗಳು ಹಾಕುವ ಪ್ರಶ್ನೆ, ರಥೋತ್ಸವನ್ನೇಕೆ ಇಷ್ಟೊಂದು ತಡವಾಗಿ ಮಾಡಲಾಗುತ್ತದೆ? ಅದಕ್ಕೆ ಕಾರಣ ಜಾತ್ರೆಯಲ್ಲಿರುವ ಕ್ಲಿಷ್ಟ ಸಂಪ್ರದಾಯಗಳು, ರಥೋತ್ಸವಕ್ಕೆ ಗೊಲ್ಲ ಸಮುದಾಯದ ಮೀಸಲು ಬೇಕೆಬೇಕು. ಗೊಲ್ಲ ಸಮುದಾಯದ ನಿರ್ದಿಷ್ಟ ಮನೆತನಗಳು ಮಡಕೆಯಲ್ಲಿ ಮೀಸಲು (ಹಾಲು–ಮೊಸರು) ತರಬೇಕು. ಮೀಸಲು ತರುವ ಮುಂಚೆ ಅವರವರ ಮನೆ ಹಾಗು ಹಾಲುಕೊಡುವ ಎಮ್ಮೆ ಅಥವಾ ಆಕಳುಗಳನ್ನು ಸ್ವಚ್ಛಗೊಳಿಸಬೇಕು. ನಂತರ ಹಾಲನ್ನು ಕರೆದು ಮೀಸಲು ಸಿದ್ದಗೊಳಿಸಬೇಕು. ನಂತರ ಸಿದ್ಧಗೊಂಡ ಮೀಸಲನ್ನು ಮೆರವಣಿಗೆ ಮೂಲಕ ತಂದು ರಥದ ಸುತ್ತ ಹಾಕಿರುವ ಎಡೆಗೆ (ಅನ್ನ) ಅರ್ಪಿಸುತ್ತಾರೆ. ಈ ಎಡೆಯನ್ನು ಗೌಡರ ಮನೆತನದವರು ಅರ್ಪಿಸುತ್ತಾರೆ. ನಂತರ ಪೂಜೆ ನೆರವೇರಿಸಲಾಗುತ್ತದೆ. ಪೂಜೆ ನೆರವೇರಿಸಿದ ಬಳಿಕ ಎಡೆಗಳನ್ನು "ಕೈವಾಡದವರಿಗೆ" ನೀಡಲಾಗುತ್ತದೆ. ರಥೋತ್ಸವ ನೆರವೇರುವ ಮುಂಚಿತವಾಗಿ ಗ್ರಾಮದೇವತೆ ದುರ್ಗಾಂಬಿಕೆ ರಥ ಪ್ರದಕ್ಷಿಣೆ ಹಾಕುತ್ತಾಳೆ. ನಂತರ ಶ್ರೀದೇವಿಯ ಹೂವಿನ ಹರಾಜು ಪ್ರಕ್ರಿಯೆ ನಡೆಯುತ್ತದೆ. ಈ ಎಲ್ಲ ಆಚರಣೆಗಳು ನೆರವೇರಿದ ಬಳಿಕವಷ್ಟೇ ರಥೋತ್ಸವ ಕಾರ್ಯಕ್ರಮ ನಡೆಯಲು ಸಾಧ್ಯ.[9]

**ಅಶ್ವೋತ್ಸವ**

ಕುದುರೆ ಆರಾಧನೆಯೇ ಅಶ್ವೋತ್ಸವ, ಅಶ್ವಮೂರ್ತಿಯನ್ನು ಇಲ್ಲಿ ಆರಾಧಿಸಲಾಗುತ್ತದೆ. ಅಶ್ವವನ್ನು ದ್ಯಾಮಲಾಂಬೆಯ ದೇವಸ್ಥಾನದಿಂದ ಊರಿನ ಆಂಜನೇಯ ದೇವಸ್ಥಾನದವರೆಗೆ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ.[10]

**ನವಿಲೋತ್ಸವ ಮತ್ತು ಸಿಡಿ ಉತ್ಸವ**

ನವಿಲಿನ ಮೂರ್ತಿಯನ್ನು ಈ ದಿನ ಆರಾಧಿಸಲಾಗುತ್ತದೆ. ಈ ಮೂರ್ತಿಯನ್ನು ಮೆರವಣಿಗೆಯಲ್ಲಿ ಮಂಗಳವಾದ್ಯಗಳೊಂದಿಗೆ ಟ್ರ್ಯಾಕ್ಟರ್ ನಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಅಲಂಕೃತ ಸಿಡಿ ಕಂಬದಲ್ಲಿ

ಆಡುವ ಭಕ್ತರನ್ನು ನೋಡುವುದೇ ವಿಶಿಷ್ಟ. ಅಲಂಕೃತ ಸಿಡಿಕಂಬವನ್ನು ಮೊದಲು ದ್ಯಾಮಲಾಂಬೆಯ ದೇವಸ್ಥಾನದಿಂದ ಆಂಜನೇಯ ದೇವಸ್ಥಾನದವರೆಗೆ ಮೆರವಣಿಗೆ ನಡೆಸಲಾಗುತ್ತದೆ. ಆಂಜನೇಯ ದೇವಸ್ಥಾನದಿಂದ ಸಿಡಿ ಆಡುವುದು ಪ್ರಾರಂಭವಾಗುತ್ತದೆ. ಸಿಡಿ ಆಡುವುದಕ್ಕಾಗಿ ಚಿಕ್ಕ ಮಕ್ಕಳು ಮಹಿಳೆಯರು ಮತ್ತು ಪುರುಷರು ಸಿದ್ಧರಾಗಿರುತ್ತಾರೆ. ಸಿಡಿಯು ಚಲಿಸುತ್ತಾ ಮುಂದೆ ಬಂದಂತೆ ಹರಕೆ ಮಾಡಿಕೊಂಡು ಎಲ್ಲರೂ ಸ್ವಲ್ಪ ಸಮಯ ಸಿಡಿ ಆಡುತ್ತಾರೆ. ಸುಮಾರು 20 ಅಡಿ ಎತ್ತರದಲ್ಲಿ ಸಿಡಿ ಆಡುವುದನ್ನು ರಸ್ತೆಯ ಎರಡೂ ಬದಿಗಳಲ್ಲಿ ನಿಂತ ಭಕ್ತರು ಭಕ್ತಿಯ ಪರಾಕಷ್ಠೆಯಲ್ಲಿ ಮುಳುಗಿ ಮೂಕ ವಿಸ್ಮಿತರಾಗಿ ಭಯದಿಂದ ನೋಡುತ್ತಾರೆ. ಮಂಗಳವಾದ್ಯ, ಚಮಳ, ಯುವಕರ ನೃತ್ಯ ಮತ್ತು ಸಿಡಿಮದ್ದುಗಳ ಶಬ್ದದೊಂದಿಗೆ ಸಾಗುವ ಸಿಡಿ ಆಟ ದ್ಯಾಮಲಾಂಬೆಯ ದೇವಸ್ಥಾನ ಬಳಿ ಕೊನೆಗೊಳ್ಳುತ್ತದೆ. ಸಿಡಿಯನ್ನು ದೊಡ್ಡೇರಿ ಗ್ರಾಮದ ಭಕ್ತರು ನೆರವೇರಿಸುವುದು ನಡೆದು ಬಂದ ಸಂಪ್ರದಾಯ.[11]

**ಹುಲ್ಲೂರಿನ ಕಾಳಿಕಾದೇವಿ ಜಾತ್ರಾ ರಥೋತ್ಸವ**

ಹುಲ್ಲೂರು ಗ್ರಾಮದಲ್ಲಿ ನೆಲೆಸಿರುವ ಪುರಾತನ ಹಾಗು ಐತಿಹಾಸಿಕ ಪ್ರಸಿದ್ಧ ಶ್ರೀ ಕಾಳಿಕಾದೇವಿ ಅಮ್ಮನವರ ಜಾತ್ರಾ ರಥೋತ್ಸವವು ಪರಂಪರೆಯಿಂದ ಉಳಿದುಕೊಂಡು ಬಂದಿದೆ. ಕಾಳಿಕಾದೇವಿ ಅಮ್ಮನವರ ಜಾತ್ರಾ ರಥೋತ್ಸವದ ವಿಧಾನಗಳು ಬಹಳಷ್ಟು ಯಥಾ ಪ್ರಕಾರವೇ ನಡೆಯುತ್ತಿವೆ. ಕಾಳಿಕಾದೇವಿ ಅಮ್ಮನವರ ಜಾತ್ರೆಯ ಕೆಲವು ಅಂಶಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ನೋಡಬಹುದು. ಶ್ರೀ ಬರನಾಮ ಸಂವತ್ಸರ ಚೈತ್ರ ಬಹುಳ ಸಪ್ತಮಿಯಂದು 6 ದಿನಗಳ ಕಾಲ ಈ ಜಾತ್ರೋತ್ಸವ ನಡೆಯುತ್ತದೆ.

ಸೋಮವಾರ ಅಕಳಕೇರಿಯಲ್ಲಿ ಗಂಗಾಪೂಜೆ ಮಾಡುತ್ತಾರೆ. ಈ ಗಂಗಾಪೂಜೆಯನ್ನು ಚಿಕ್ಕಪುರ ಶ್ರೀ ವಿಶ್ವಕರ್ಮ ವಂಶಸ್ಥರಿಂದ ನಡೆಯುತ್ತದೆ. ಅದೇ ದಿನ ಸಂಜೆ 4 ಗಂಟೆಗೆ ಹುಲ್ಲೂರು ದೇವಸ್ಥಾನಕ್ಕೆ ಅಗ್ನಿ ಕುಂಡಾರ್ಚನೆ ಕಾರ್ಯಕರ್ತರ ಆಗಮನ ಸೋಮವಾರ ಬೆಳಗಿನ ಜಾವ ಬ್ರಾಹ್ಮಿ ಮೂಹರ್ತದಲ್ಲಿ ಕುಂಭಾಭಿಷೇಕ ಪೂಜೆ ಮಾಡುತ್ತಾರೆ.

ಮಂಗಳವಾರ ಬೆಳಿಗ್ಗೆ 6–00 ಗಂಟೆಗೆ ಮೊದಲಂಗಿತ್ತಿಶಾಸ್ತ್ರ ಮಾಡುತ್ತಾರೆ. ಬೆಳ್ಳಗ್ಗೆ 10–00 ಗಂಟೆಯಿಂದ ಅಗ್ನಿಕುಂಡಾರ್ಚನೆಯ ಕಾರ್ಯಕ್ರಮ ದೇವಿಗೆ ಹರಕೆಯೊತ್ತವರು ದೇವಾಲಯದ ಮುಂದೆ ಕೆಂಡದಲ್ಲಿ ನಡೆದು ಹರಕೆ ತೀರಿಸುತ್ತಾರೆ. ನಂತರ ಸಮಸ್ತ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಇರುತ್ತದೆ. ಈ ಸೇವೆ ಕೊಡಗವಳ್ಳಿ ಶ್ರೀ ವಿಶ್ವಕರ್ಮ ವಂಶಸ್ಥರಿಂದ ಮತ್ತು ಹುಲ್ಲೂರು ಜಾನುಕೊಂಡ ಗ್ರಾಮಸ್ಥರ ಸಹಕಾರದೊಂದಿಗೆ ನಡೆಯುತ್ತದೆ. ಬುಧವಾರ ಸಾಯಂಕಾಲ ವೃಷಭೋತ್ಸವವಿರುತ್ತದೆ. ದೇವಿಗೆ ವಿಶೇಷ ಅಲಂಕಾರದೊಂದಿಗೆ ಮೆರವಣಿಗೆ ಮಾಡುತ್ತಾರೆ. ಜಾನುಕೊಂಡದಅರ್ಚಕರ ವಂಶಸ್ಥರು ನಡೆಸುತ್ತಾರೆ. ಗುರುವಾರ ಸಾಯಂಕಾಲ ಕುದುರೆ ಉತ್ಸವ ಅಥವಾ ಅಶ್ವಥೋತ್ಸವ ನಡೆಯುತ್ತದೆ. ಇದರ ಸೇವೆಯನ್ನು ತುಪ್ಪದಹಳ್ಳಿ ಶ್ರೀ ವಿಶ್ವಕರ್ಮ ವಂಶಸ್ಥರಿಂದ ನಡೆಯುತ್ತದೆ. ಶುಕ್ರವಾರ ಸಾಯಂಕಾಲ ಧೂಳೋತ್ಸವ ನಡೆಯುತ್ತದೆ. ಶನಿವಾರ ಬೆಳಿಗ್ಗೆ ಬ್ರಹ್ಮರಥೋತ್ಸವ ಜಾನುಕೊಂಡದ ಗ್ರಾಮಸ್ಥರು ಮತ್ತು ಭಕ್ತಾದಿಗಳಿಂದ ನಡೆಯುತ್ತದೆ. ದೇವಿಯ ರಥೋತ್ಸವವನ್ನು ಗ್ರಾಮಲ್ಲಿ ವಿಜೃಂಭಣೆಯಿಂದ ನಡೆಸಲಾಗುತ್ತದೆ. ನಂತರ 12 ಗಂಟೆಗೆ ಕಂಕಣ ವಿಸರ್ಜನೆಯನ್ನು ಬಿ. ದುರ್ಗದ ಶ್ರೀ ವಿಶ್ವಕರ್ಮ ವಂಶಸ್ಥರಿಂದ ಮಾಡಿ ಜಾತ್ರಾಮಹೋತ್ಸವನ್ನು ವಿಸರ್ಜನೆ ಮಾಡುತ್ತದೆ. ಹೀಗೆ ಕಾಳಿಕಾದೇವಿ ಅಮ್ಮನವರ ಜಾತ್ರಾರಥೋತ್ಸವ ನಡೆಯುತ್ತದೆ.[12]

### ಹುಲ್ಲೂರಿನ ಆಂಜನೇಯ ಸ್ವಾಮಿ ಹಾಗೂ ಶ್ರೀ ವೀರಭದ್ರಸ್ವಾಮಿ ಜಾತ್ರಾಮಹೋತ್ಸವ

ಶ್ರೀ ಖರನಾಮ ಸಂವತ್ಸರ ಚೈತ್ರ ಬಹುಳ ಸಪ್ತಮಿಯಂದು ನಾಲ್ಕು ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯುತ್ತದೆ. ಶನಿವಾರ ಬೆಳಿಗ್ಗೆ 9 ಗಂಟೆಗೆ ಆಂಜನೇಯ ಸ್ವಾಮಿ ಕುಂಕುಮಾರ್ಚನೆ ನಂತರ ಆಂಜನೇಯ ಸ್ವಾಮಿಯನ್ನು ಊರಿನ ಗೌಡರ ಮನೆಗೆ ಕರೆದು ಕೊಂಡುಬಂದು ಪೂಜೆ ನಡೆಸುತ್ತಾರೆ. ನಂತರ ದೇವಾಲಯಕ್ಕೆ ಪುನಃ ಕರೆದುಕೊಂಡು ಬಂದು ಕಂಕಣಧಾರಣೆ ನಂತರ ಅನ್ನಸಂತರ್ಪಣೆ ಇರುತ್ತದೆ. ಭಾನುವಾರ ಬೆಳಗ್ಗೆ 10 ಗಂಟೆಗೆ ಆಂಜನೇಯ ಸ್ವಾಮಿ ಧೂಳೋತ್ಸವ ನಡೆಯುತ್ತದೆ. ಸಂಜೆ 5 ಗಂಟೆಗೆ ಇತರೆ ವಾದ್ಯಗಳೊಂದಿಗೆ ಅಶ್ವೋತ್ಸವ ನಡೆಯುತ್ತದೆ. ಸೋಮವಾರ ಮಧ್ಯಾಹ್ನ 4 ಗಂಟೆಗೆ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಮಾಡುತ್ತಾರೆ. ನಂತರ ಹೂವಿನ ಪಲ್ಲಕ್ಕಿಯಲ್ಲಿ ಆಂಜನೇಯ ಸ್ವಾಮಿಯನ್ನು ಕೂರಿಸಿಕೊಂಡು ಮೆರವಣಿಗೆ ಮಾಡುತ್ತಾರೆ. ಮಂಗಳವಾರ ಬೆಳಗ್ಗೆ 9 ಗಂಟೆಯಿಂದ ಶ್ರೀ ವೀರಭದ್ರಸ್ವಾಮಿಯ ಕೆಂಡಾರ್ಚನೆ ಇರುತ್ತದೆ. ನಂತರ ಸಂಜೆ 4 ಗಂಟೆಗೆ ಗೌಡರ ಮನೆಯಿಂದ ದೊಡ್ಡ ಎಡೆಸೇವೆ ಇರುತ್ತದೆ. ನಂತರ ಸಂಜೆ 6 ಗಂಟೆಗೆ ಓಕುಳಿ ಮತ್ತು ಕಂಕಣ ವಿಸರ್ಜನೆ ಮಾಡುತ್ತಾರೆ. ನಂತರ ಸಂಜೆ 7 ಗಂಟೆಗೆ ಸಕಲ ವಾದ್ಯಗಳೊಂದಿಗೆ ಶ್ರೀ ಆಂಜನೇಯ ಸ್ವಾಮಿ ಶ್ರೀ ವೀರಭದ್ರಸ್ವಾಮಿ ಮತ್ತು ಎಲ್ಲಾ ದೇವರುಗಳ ಹೂವಿನ ಪಲ್ಲಕ್ಕಿ ಉತ್ಸವಗಳನ್ನು ರಾಜ ಬೀದಿಗಳಲ್ಲಿ ನಡೆಸಲಾಗುವುದು. ಹೀಗೆ ಹುಲ್ಲೂರಿನ ಆಂಜನೇಯಸ್ವಾಮಿ ಹಾಗೂ ಶ್ರೀವೀರಭದ್ರಸ್ವಾಮಿಯ ಜಾತ್ರ ಮಹೋತ್ಸವನ್ನು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಸಕಲಭಕ್ತಾದಿಗಳ ಜೊತೆ ವಿಜೃಂಭಣೆಯಿಂದ ನಡೆಯುತ್ತದೆ.[13]

### ಹುಲ್ಲೂರು ಸಿದ್ಧೇಶ್ವರಸ್ವಾಮಿಯ ಜಾತ್ರಾ ಉತ್ಸವ

ಸಿದ್ಧೇಶ್ವರ ಸ್ವಾಮಿಯ ಜಾತ್ರಾ ಉತ್ಸವ ಕಡೆ ಶ್ರಾವಣಮಾಸದಲ್ಲಿ ನಡೆಯುತ್ತದೆ. ಕಡೆ ಶ್ರಾವಣಮಾಸದಲ್ಲಿ ಸೋಮವಾರದ ಒಂದು ದಿನ ಮಾತ್ರ ವಿಶೇಷ ಪೂಜೆ ನಡೆಯುತ್ತದೆ. ಸಕಲ ಭಕ್ತಾದಿಗಳು ಭಾನುವಾರ ರಾತ್ರಿಯಿಂದಲೇ ಸಿದ್ಧೇಶ್ವರ ದೇವಾಲಯದಲ್ಲಿ ದೇವಾಲಯದ ವಿಶಾಲವಾದ ಪರಿಸರದಲ್ಲಿ ಬಿಡಾರಹೂಡಿ ತಂಗುತ್ತಾರೆ. ಭಕ್ತಾದಿಗಳು ದವಸಧಾನ್ಯಗಳನ್ನು ತಂದು ಸೋಮವಾರ ಬೆಳಗಿನ ಜಾವ ಸಿದ್ಧೇಶ್ವರನಿಗೆ ಅಭಿಷೇಕ ಪೂಜೆ ಮಾಡಿ ವಿಶೇಷ ಅಲಂಕಾರ ಮಾಡುತ್ತಾರೆ. ನಂತರ ಭಕ್ತಾದಿಗಳು ತಂದಿರುವ ದವಸ ಧಾನ್ಯಗಳಿಂದ ಗದ್ದಿಗೆ ಪೂಜೆ ಮಾಡಿ ಅದೇ ದವಸ ಧಾನ್ಯದಿಂದ ಪ್ರಸಾದ ಮಾಡಿ ಸಕಲ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡುತ್ತಾರೆ. ನಂತರ ಹರಕೆ ಹೊತ್ತಿದ್ದ ಭಕ್ತಾದಿಗಳು ಜವಳಿ ತೆಗೆಸಿ ನಂತರ ಅನ್ನಸಂತರ್ಪಣೆ ಮಾಡಿಸಿರುತ್ತಾರೆ.

### ಲಕ್ಷ್ಮೀಸಾಗರ ಗ್ರಾಮದ ಜಾತ್ರೆಗಳು

ಲಕ್ಷ್ಮೀಸಾಗರ ಗ್ರಾಮದಲ್ಲಿ ನಡೆಯುವ ವಿಶೇಷ ಜಾತ್ರೆಗಳಿಂದ ಸುತ್ತ ಮುತ್ತಲಿನ ಗ್ರಾಮಗಳಾದ ಬಳ್ಳೇಕಟ್ಟೆ, ಬೀರಾವರ, ಬಳಿಗಟ್ಟೆ, ವಿಜಾಪುರ, ಗುಂಟನೂರು, ಐನಳ್ಳಿಗಳಿಂದಲೂ ಜನರು ಈ ಜಾತ್ರೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ತಮ್ಮ ಬೇಡಿಕೆಗಳನ್ನು ದೇವರಲ್ಲಿ ಬೇಡಿಕೊಳ್ಳುವುದರ ಮೂಲಕ ಈಡೇರಿದರೆ ವಿಶೇಷ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಶ್ರೀ ಮಹೇಶ್ವರ ಜಾತ್ರೆಯಲ್ಲಿನ ವಿಶೇಷ ಜಾತ್ರೆಯಾಗಿದೆ.

### ಮಹೇಶ್ವರಸ್ವಾಮಿಯ ಜಾತ್ರೆ

ಮಹೇಶ್ವರಸ್ವಾಮಿಯ ದೇವಾಲಯಕ್ಕೆ ಮೊದಲಿದ್ದ ಹೆಸರು ಈಶ್ವರ ದೇವಾಲಯವೆಂದು, ಶ್ರೀ ಮಹೇಶ್ವರಸ್ವಾಮಿಗೆ ದಿನನಿತ್ಯವು ಪೂಜೆ, ಪುನಸ್ಕಾರಗಳು ನಡೆಯುತ್ತಿದ್ದು ಸಂಜೆ ವೇಳೆ ದ್ವೀಪವನ್ನು ಹಚ್ಚುತ್ತಾರೆ ಶ್ರಾವಣಮಾಸದ ಸಂದರ್ಭದಲ್ಲಿ ಪ್ರತಿದಿನವೂ ಊರಿನ ಇಚ್ಚೆಯುಳ್ಳ ಪ್ರಜೆಗಳು ಅಭಿಷೇಕ

ಮಾಡಿಸುವುದರ ಜೊತೆಗೆ ಬಂದಂತಹ ಭಕ್ತರಿಗೆ ದಾಸೋಹ ಮಾಡುತ್ತಾರೆ. ಇದಲ್ಲದೇ ಪ್ರತಿ ತಿಂಗಳು ಅಮವಾಸೆಯ ದಿನದಂದು ಆಸಕ್ತಿಯುಳ್ಳವರು ಅಭಿಷೇಕ ಮಾಡಿಸುತ್ತಾರೆ. ಅಭಿಷೇಕ ಮಾಡುವ ಮುನ್ನ ನೀರಿದ್ದ ಕಡೆಯಿಂದ ಗಂಗಾಸ್ನಾನ ಮಾಡಿಕೊಂಡು ಪುನಃ ದೇವಸ್ಥಾನಕ್ಕೆ ಮರಳಿದ ಮೇಲೆ ಅಭಿಷೇಕ ಪ್ರಾರಂಭವಾಗುತ್ತದೆ. ಶ್ರಾವಣಮಾಸದ ದಿನಗಳೆಲ್ಲವೂ ಮುಗಿದ ನಂತರ ಶ್ರಾವಣಮಾಸದ ಕೊನೆಯದಿನ ರುಧ್ರಾಭಿಷೇಕವನ್ನು ಮಾಡುವುದಕ್ಕೆ ಸಿದ್ಧತೆ ಮಾಡಿಕೊಂಡಿರಲಾಗುತ್ತದೆ. ಈ ಸಂದರ್ಭದಲ್ಲಿ ಊರಿನ ಭಕ್ತಾದಿಗಳೆಲ್ಲರೂ ತಮ್ಮ ಕೈ ಆದಷ್ಟು ಕಾಣಿಕೆಯನ್ನು ಕೊಡುತ್ತಾರೆ. ಕಾಣಿಕೆಯಿಂದ ಹಾಗೂ ಭಕ್ತಾದಿಗಳಿಂದ ಸಂಗ್ರಹಿಸಿದ ಹಣದಿಂದ ರುಧ್ರಾಭಿಷೇಕದ ದಿನದಂದು ಅಭಿಷೇಕ ಮುಗಿದ ನಂತರ ದಾಸೋಹವನ್ನು ಏರ್ಪಡಿಸಲಾಗಿರುತ್ತದೆ.

ಪ್ರತಿ ವರ್ಷವು ಮಹೇಶ್ವರಸ್ವಾಮಿಯ ಜಾತ್ರೆಯನ್ನು ಆಚರಿಸಲಾಗುತ್ತದೆ ಡಿಸೆಂಬರ್ ಅಥವಾ ಜನವರಿ ತಿಂಗಳುಗಳಲ್ಲಿ ಮೊದಲನೆಯವಾರದ ಮಂಗಳವಾರ, ಬುಧವಾರ ಜಾತ್ರೆಯನ್ನು ಮಾಡಲಾಗುತ್ತದೆ. ಮಂಗಳವಾರ ಜಾತ್ರೆಯು ವಿಶೇಷವಾಗಿರುತ್ತದೆ. ಇದಕ್ಕೂ ಪೂರ್ವದಲ್ಲಿ ಸೋಮವಾರದ ರಾತ್ರಿ ಪಲ್ಲಕ್ಕಿಯ ಮೂಲಕ ಸಂಪ್ರದಾಯದಂತೆ ಮಹೇಶ್ವರನ ಮುಖಪದ್ಮವನ್ನು ಸಾಹುಕಾರ ಪರ್ವತಪ್ಪನ ಮನೆಯಿಂದ ದೇವಸ್ಥಾನಕ್ಕೆ ತರಲಾಗುತ್ತದೆ. ಮಂಗಳವಾರದ ಬೆಳಗಿನ ಜಾವ 5–30 ರಿಂದ 10 ಗಂಟೆಯವರೆಗೆ ಅಭಿಷೇಕ ಪೂಜೆ ನಡೆಸಲಾಗುತ್ತದೆ. ಆ ನಂತರ ಸುತ್ತಮುತ್ತಲಿನ ಗ್ರಾಮಗಳಿಂದ ಬಂದ ಭಕ್ತಾದಿಗಳಿಗೂ ಹಾಗು ಊರಿನ ಜನತೆಗೆ ಬೆಲ್ಲದಹಾಲು, ಬಾಳೆಹಣ್ಣು, ಅನ್ನದ ಪ್ರಸಾದವನ್ನು ಕೊಡಲಾಗುತ್ತದೆ. ಪ್ರಸಾದವನ್ನು ಸೇವಿಸುವುದು ಪರಮಶ್ರೇಷ್ಠವೆಂದು ನಂಬಿದ ಭಕ್ತಾಧಿಗಳು ಆ ದಿನ ತಪ್ಪದೇ ಬಂದ ಪ್ರಸಾದವನ್ನು ಅಲ್ಲಿಯೇ ಸೇವಿಸಬೇಕು. ಹೊರಗಡೆ ತೆಗೆದುಕೊಂಡು ಹೋಗಬಾರದು. ಇನ್ನೊಂದು ವಿಶೇಷತೆ ಎಂದರೆ, ಮಂಗಳವಾರ ಜಾತ್ರೆಯ ದಿನ ಹೆಣ್ಣು ಮಕ್ಕಳಾರು ದೇವಾಲಯಕ್ಕೆ ಪ್ರವೇಶಿಸುವಂತಿಲ್ಲ. ಒಂದು ವೇಳೆ ಪ್ರವೇಶಿಸಿದರೆ ಅಂತಹ ಹೆಣ್ಣು ಕಲ್ಲಾಗಿ (ಶಿಲೆ) ಮಾರ್ಪಾಡುತ್ತಾಳೆಂದು ಅಲ್ಲಿನ ಐತಿಹ್ಯವಿದೆ. ಅದು ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಮಂಗಳವಾರ ದೇವಸ್ಥಾನದಲ್ಲಿ ಬೆಲ್ದಾಲು, ಅನ್ನ, ಬಾಳೆಹಣ್ಣು ಸೇವಿಸಿ ಬಂದ ಜನತೆಯ ಮನೆಗೆ ಬಂದು ಜಾತ್ರೆಯ ಪ್ರಯುಕ್ತ ಮಾಡಿದ ಸಜ್ಜೆಯ ರೊಟ್ಟಿ, ಪಲ್ಯವನ್ನು ಸೇವಿಸುತ್ತಾರೆ. ಬುಧವಾರ ಮಹೇಶ್ವರಸ್ವಾಮಿಗೆ ವಿಶೇಷ ಪೂಜೆಗಳಿಂದ ಅಲಂಕರಿಸುತ್ತಾರೆ. ಈ ದಿನ ಊರಿನ ಜನರೆಲ್ಲರೂ ಪಾಲ್ಗೊಂಡು ಪಲ್ಲಕ್ಕಿಯ ಮೆರವಣಿಗೆ ಸಿದ್ಧತೆ ನಡೆಸುತ್ತಾರೆ. ಸಂಜೆಯ ವೇಳೆ ಊರಿನ ಮಧ್ಯಬಾಗದಲ್ಲಿ ಪಲ್ಲಕ್ಕಿ ತಂದಾಗ ಎಲ್ಲಾ ವರ್ಗದವರು ಸ್ವಾಮಿಗೆ ಹಣ್ಣು–ಕಾಯಿ, ಮಂಗಳಾರತಿ ಮಾಡಿಸುತ್ತಾರೆ. ಪಲಕ್ಕಿಯ ಮೂಲಕ ಮುಖಪದ್ಮವನ್ನು ಪುನ: ಸಾಹುಕಾರ ಪರ್ವತಪ್ಪನವರ ಮನೆಯಲ್ಲಿಡುವುದು ಸಂಪ್ರದಾಯವಾಗಿದೆ. ಇದಕ್ಕೆ ಕಾರಣ ದೇವಸ್ಥಾನದ ನಿರ್ಮಾಣ ಹಾಗು ಅದಕ್ಕೆ ಜಮೀನು ನೀಡಿರುವುದು ಸಾಹುಕಾರ ಮನೆತನದ ಬಸಪ್ಪನವರೆಂದು ಹೇಳಲಾಗುತ್ತದೆ.

**ಕಲ್ಲಪ್ಪನ ಪರುವು**

ಗ್ರಾಮದ ಪ್ರಾಚೀನ ದೇವಾಲಯವಾದ ಕಲ್ಲಪ್ಪನ ದೇವಸ್ಥಾನವು ಕೆರೆಯ ಬಲಭಾಗದಲ್ಲಿದ್ದು, ಊರ ಜನತೆ ಅಲ್ಲಿಗೆ ಹೋಗುವುದು ಅಪರೂಪವಾದರೂ, ದಿನನಿತ್ಯವು ಪೂಜೆ–ಪುನಸ್ಕಾರಗಳು ನಡೆಯುತ್ತವೆ. ಪ್ರತಿ ವರ್ಷ ಕಲ್ಲೇಶ್ವರನ ಪರುವು ಅದ್ದೂರಿಯಾಗಿ ನಡೆಯುತ್ತದೆ. ಕಲ್ಲಪ್ಪನ ಪರುವು ವಿಶೇಷವಾಗಿ ಮಳೆಬಾರದಿದ್ದ ಸಂದರ್ಭದಲ್ಲಿ ನಡೆಸಲಾಗುತ್ತದೆ. ಒಂದು ದಿನದ ಈ ಪರುವು ಆಚರಣೆಯಲ್ಲಿ ಕಲ್ಲಪ್ಪನ ದೇವಸ್ಥಾನದಲ್ಲಿರುವ ಶಿವಲಿಂಗಕ್ಕೆ ಅಭಿಷೇಕ ಮಾಡುವದರ ಜೊತೆಗೆ ಅದೇ ಸಂದರ್ಭದಲ್ಲಿ ಊರಿನ ಪ್ರಮುಖರೆಲ್ಲರೂ ಸೇರಿ ಗ್ರಾದ್ರಿಗುಡ್ಡಕ್ಕೆ ಹೋಗಿ ಎಡೆಕೊಟ್ಟು ಬರುತ್ತಾರೆ. ಅಲ್ಲಿಂದ ಬಂದ ಮೇಲೆಯೇ ಇಲ್ಲಿ

ಪ್ರಸಾದವನ್ನು ನೀಡುವುದಕ್ಕೆ ಪ್ರಾರಂಭಿಸುವುದು ಸಂಪ್ರದಾಯ ಒಂದೊಂದು ವರ್ಷ ಒಂದೊಂದು ಬಗೆಯ ಪ್ರಸಾದವನ್ನು ಮಾಡಿಸಲಾಗಿರುತ್ತದೆ. ಹೆಚ್ಚಾಗಿ ಹೆಸರುಬೇಳೆ ಪಾಯಸ ಮತ್ತು ಚಿತ್ರನ್ನವನ್ನು ಮಾಡಿ ಈ ಪ್ರಸಾದವನ್ನು ಊರಿನ ಪ್ರತಿಯೊಬ್ಬರೂ ಬಂದು ದೇವಸ್ಥಾನ ವಿಶಾಲವಾದ ಪ್ರಾಂಗಣದಲ್ಲಿ ಕುಳಿತು ಸೇವಿಸುತ್ತಾರೆ.

**ಆಂಜನೇಯ ಉತ್ಸವ**

ಗ್ರಾಮದ ಮುಂಭಾಗದಲ್ಲಿರುವ ಆಂಜನೇಯ ದೇವಾಲಯಯದಲ್ಲಿ ಪ್ರತೀ ಶನಿವಾರವು ಕುಂಕುಮ ಪೂಜೆಯಿಂದ ಮೂರ್ತಿಯನ್ನು ಅಲಂಕರಿಸುತ್ತಾರೆ ಹಾಗು ಪ್ರತಿ ವರ್ಷವು ಆಂಜನೇಯ ಸ್ವಾಮಿಯ ಉತ್ಸವವನ್ನು ರಾಮನವಮಿ ಆದನಂತರ ಆಚರಿಸಲಾಗುತ್ತದೆ. ಎರಡು ದಿನದ ಉತ್ಸವದಲ್ಲಿ ಶನಿವಾರದ ರಾತ್ರಿಯ ವೇಳೆ ಸಂಪೂರ್ಣವಾಗಿ ಮದಲಿಂಗಪನಶಾಸ್ತ್ರವನ್ನು ಮಾಡಲಾಗುತ್ತದೆ. ಬೆಳಗಿನಜಾವದವರೆಗೂ ವಿಶೇಷ ರೀತಿಯಿಂದ ಆಂಜನೇಯನನ್ನು ಅಲಂಕರಿಸಲಾಗುತ್ತದೆ. ನಂತರ ಬೆಳಿಗ್ಗೆ ಆಂಜನೇಯ ಉತ್ಸವ ಮೂರ್ತಿಯನ್ನು (ಪಂಚಲೋಹದಿಂದ ಮಾಡಿದ) ರಥದಲ್ಲಿ ಕುಳ್ಳಿರಿಸಿಕೊಂಡು ದೇವಸ್ಥಾನದಿಂದ ಊರ ಮುಂಭಾಗದಲ್ಲಿರುವ ಬನ್ನಿಮರಕ್ಕೆ ಪೂಜೆ ಮಾಡಿ ಎಡೆನೀಡುವುದರೊಂದಿಗೆ ತೇರು ಹಿಂದುರಿಗಿಸಿಕೊಳ್ಳಲಾಗುತ್ತದೆ. ನಂತರ ಮಹೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಎಡೆ ನೀಡಿ ರಥವನ್ನು ಪುನಃ ಆಂಜನೇಯ ದೇವಸ್ಥಾನಕ್ಕೆ ತರಲಾಗುತ್ತದೆ. ತೇರು ಊರ ಮಧ್ಯ ಬಂದಾಗ ಎಲ್ಲಾ ಜನತೆಯು ಆಂಜನೇಯ ದರ್ಶನ ಪಡೆದು ರಥದ ತೇರಿಗೆ ಸೂರ್ ಮೆಣಸನ್ನು ಎಸೆಯುತ್ತಾರೆ. ತೇರು ಹೋಗುವ ಸಂದರ್ಭದಲ್ಲಿ ಸೂರು ಮೆಣಸು ಸಿಕ್ಕರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಜಾತ್ರೆಯ ಪೂರ್ವದಲ್ಲಿ ನಡೆಯುವ ರಾಮನವಮಿ ದಿನ ಪಾನಕ ಕೋಸಂಬ್ರಿ ಕೊಡುವುದು ಸಾಮಾನ್ಯವಾಗಿ ಕಂಡು ಬರುತ್ತದೆ.

**ಕಾಳವ್ವನ ಹುಣ್ಣಿಮೆ**

ಕಾಳವ್ವನ ಹುಣ್ಣಿಮೆಯು, ಬೇಡ ಸಮುದಾಯದ ಬರಗೇರಮ್ಮನ ದೇವಸ್ಥಾನ ಪೂಜಾರಿಗಳು, ಬರಗೇರಮ್ಮನ ದೇವಸ್ಥಾನದ ಹಿಂಬದಿಯಲ್ಲಿರುವ ಬೇವಿನ ಮರದ ಕೆಳಗಡೆ ಕೆಲವೊಂದು ಕಲ್ಲುಗಳನ್ನು ಪೂಜಿಸಲಾಗುತ್ತದೆ. ಅದನ್ನು ಮಾರಮ್ಮನಕಟ್ಟೆ ಎಂದು ಕರೆಯಲಾಗುತ್ತದೆ. ಬರಗೇರಮ್ಮನನ್ನು ವಿಶೇಷವಾಗಿ ಪೂಜೆ–ಪುನಸ್ಕಾರ ಮಾಡಿ, ಉತ್ಸವ ಮೂರ್ತಿಯನ್ನು ಅಲಂಕಾರ ಮಾಡಿ ಊರಿನ ಎಲ್ಲ ಭಾಗಗಳಲ್ಲಿಯು ಹೋಗಿ ದವಸ–ಧಾನ್ಯಗಳನ್ನು ಕ್ರೋಢಿಕರಿಸಿಕೊಂಡು ದರ್ಶನವನ್ನು ನೀಡುತ್ತಾಳೆ. ಸಂಗ್ರಹವಾದ ಧಾನ್ಯಗಳಿಂದ, ಹುರುಳಿ ಕಾಳುಗಳನ್ನು ಬೇಯಿಸಿ ಊರಿನ ಜನತೆಗೆ ಹಂಚುತ್ತಾರೆ. ಇದ ಕಾಳುಗಳನ್ನು ಸಂಗ್ರಹಿಸಿ ಅವುಗಳನ್ನು ಬೇಯಿಸಿ ಕೊಡುವ ಆಚರಣೆಯನ್ನು ಕಾಳವ್ವನ ಹುಣ್ಣಿಮೆ ಎಂದು ಕರೆಯುತ್ತಾರೆ. ಹೀಗೆ ಲಕ್ಷ್ಮೀಸಾಗರ ಗ್ರಾಮದಲ್ಲಿನ ಸಾಂಸ್ಕೃತಿಕ ಆಚರಣೆಗಳೆಲ್ಲವೂ ಹಿರಿಯರು ಮಾಡಿಕೊಂಡುಬಂದಂತಹ ಆಚರಣೆಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರಲಾಗುತ್ತಿದೆ. ಮಾರಮ್ಮನ ಜಾತ್ರೆ ಮಾತ್ರ ಐದು ವರ್ಷಗಳಿಗೊಮ್ಮೆ, ಏಳು ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ.[14]

**ಉಪಸಂಹಾರ**

ಹೀಗೆ ಹಿರೇಗುಂಟನೂರು ಪರಿಸರದ ಸಾಂಸ್ಕೃತಿಕ ಆಚರಣೆಗಳು ವಿಶಿಷ್ಠಾ ಬಗೆಯ ಆಚರಣೆಗಳಿಂದ ಪ್ರಸಿದ್ಧಿಯನ್ನು ಪಡೆದಿವೆ. ಈ ಬಗೆಯ ಆಚರಣೆಗಳು ಕಣ್ಮರೆಯಾಗುವ ಮೊದಲು ಇಂದಿನ ಯುವ ಪೀಳಿಗೆ ತಿಳಿಯುವುದು ಅತ್ಯಗತ್ಯ.

**ಕೊನೆಟಿಪ್ಪಣಿಗಳು**

1. ಗುಂಡಪ್ಪ ಡಿ.ವಿ. (1953). ಸಂಸ್ಕೃತಿ. ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ಪು.ಸಂ.6–7.
2. ಮಹಾದೇವ ಸಿ. (2007). ಕರ್ನಾಟಕ ಸಂಸ್ಕೃತಿ. ಇಲ್ಲಿ ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ (ಸಂ) ರಮೇಶ ನಾಯಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ.118–119.
3. ಮೇಲಿನದೇ.,
4. ಮೇಲಿನದೇ.,
5. ಗುರುಪ್ರಸಾದ ಸಿ.ಟಿ. (2005). ಏಳು ಊರಿನ ದೇವತೆಗಳು: ಒಂದು ಅಧ್ಯಯನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ.27.
6. ಮೇಲಿನದೇ.,
7. ಪವನ. ಜಿ.ಎಂ. (2010). ಶ್ರೀ ದ್ಯಾಮಲಾಂಬದ ದರ್ಶನ: ಶ್ರೀಕ್ಷೇತ್ರ ಹಿರೇಗುಂಟನೂರು. ಗುರು ಪ್ರಕಾಶನ, ಚಿತ್ರದುರ್ಗ. ಪು.ಸಂ.8–12.
8. ಮೇಲಿನದೇ., ಪು.ಸಂ.9.
9. ಮೇಲಿನದೇ., ಪು.ಸಂ.10.
10. ಮೇಲಿನದೇ., ಪು.ಸಂ.11.
11. ಮೇಲಿನದೇ., ಪು.ಸಂ.12.
12. ಕ್ಷೇತ್ರ ಕಾರ್ಯದಿಂದ ಪಡೆದ ಮಾಹಿತಿ.
13. ಕ್ಷೇತ್ರ ಕಾರ್ಯದಿಂದ ಪಡೆದ ಮಾಹಿತಿ.
14. ಕ್ಷೇತ್ರ ಕಾರ್ಯದಿಂದ ಪಡೆದ ಮಾಹಿತಿ.

IIMRD JOURNALS

**ವಕ್ತೃಗಳ ವಿವರ**

1. ಗುರುಸಿದ್ದಪ್ಪ ಕೆ.ಎನ್. ವಯಸ್ಸು 55, ಲಕ್ಷ್ಮೀಸಾಗರ. ದಿನಾಂಕ ಮಾರ್ಚ್ 5, 2020.
2. ದಾನಪ್ಪ. ವಯಸ್ಸು 72, ಲಕ್ಷ್ಮೀಸಾಗರ. ಏಪ್ರಿಲ್ 3, 2020.